ಶ್ರೀ ಎಸ್. ಗೋಪಾಲಗೌಡ.—ಹೀಗೆ ಬಾಕಿ ನಿಂತಿರುವ ಮೊಬಲಗಿನ ಮೇಲೆ ಬಡ್ಡಿ ಹಾಕುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನು ಪ್ರಕಾರ ಹಾಕುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ಎಷ್ಟು ಹಾಕುತ್ತೀರಿ?

Sri KADIDAL MANJAPPA.—I do not remember.

ಶ್ರೀ ಎಸ್. ಗೋಪಾಲಗೌಡ —ಹೀಗೆ ಬಾಕಿದಾರರಾಗಿರತಕ್ಕವರಲ್ಲಿ, ಜಮೀನ್ದಾರರು ಹೆಚ್ಚಿಗೆ ಇದ್ದಾರೋ ಅಥವಾ ಗೇಣಿದಾರರು ಹೆಚ್ಚಿಗೆ ಇದ್ದಾರೋ?

ಶ್ರೀ ಕಡಿದಾಳ್ ಮಂಜಪ್ಪ.—ಇದನ್ನು ಗೇಣಿದಾರರಿಂದ ವಸೂಲ್ಮಾಡುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಇಷ್ಟು ದಿವಸ ಈ ಬಾಕಿಗಳು ವಸೂಲಾಗದೆ ನಿಲ್ಲಲು ಕಾರಣಗಳೇನು?

ಶ್ರೀ ಕಡಿದಾಳ್ ಮಂಜಪ್ಪ.—ಇದಕ್ಕೆ ಆಗಲೇ ಉತ್ತರ ಹೇಳಿದ್ದೇನೆ.

ಶ್ರೀ ಎಸ್. ಗೋಪಾಲಗೌಡ.—ಹೀಗೆ 20 ವರ್ಷಗಳಿಂದಲೂ ವಸೂಲಾಗದೆ ಇರುವ ಸಂಭವವಿರುವುದರಿಂದ ಇವರನ್ನು ಬಾಕಿ ಪಟ್ಟಿಯಿಂದ ಏಕೆ ಡಿಜಾ ಮಾಡಬಾರದು?

ಅಧ್ಯಕ್ಷರು.—'ವಸೂಲಾಗುವ ಸಂಭವ ಇಲ್ಲ' ಎಂದು ಯಾರು ಹೇಳಿದರು?

ಶ್ರೀ ಕಡಿದಾಳ್ ಮಂಜಪ್ಪ.—ಆದು ಬರುವ ಸಂಭವವಿದೆ.

ಶ್ರೀ ಎಸ್. ಗೋಪಾಲಗೌಡ.—ಈ ವರ್ಷ ವಸೂಲಾಗುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ವಸೂಲಾಗುವ ಸಂಭವವಿದೆ.

Mr. SPEAKER.—That is why he has appointed two special officers. He has said that.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಈ ನಾಲೆಯಲ್ಲಿ ನೀರು ಬರದೆ ಇದ್ದರೂ ಡಿಮ್ಯಾಂಡ್ ಹಾಕಿರುವುದರಿಂದ ಇಷ್ಟು ಮೊಬಲಗು ಬಾಕಿಯಾಗಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

1 P.M.

ಶ್ರೀ ಕಡಿದಾಳ್ ಮಂಜಪ್ಪ.—ನಾಲಾ ನೀರು ಈಚೆಗೆ ಒಂದೆರಡು ವರ್ಷದಿಂದ ಕೃಷ್ಣರಾಜಸಾಗರದಲ್ಲಿ ನೀರು ಕಡಿಮೆಯಾದ ಕಾಲದಿಂದ ಕೊಡದಿರುವುದನ್ನು ಬಿಟ್ಟು ಬಿಟ್ಟು ಬಾಕಿ ಕಾಲದಲ್ಲಿ ನೀರಿದ್ದಾಗ ಕೊಟ್ಟಿದ್ದಾರೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ನಾಲಾ ಬಂದಲಾಗಾಯಿತು ಒಂದು ವರ್ಷವೂ ನೀರು ಕೊಡದಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಅಂಥವರಲ್ಲೂ ಡಿಮ್ಯಾಂಡ್ ಹಾಕಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ವಿಚಾರಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಮದ್ದೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಜಾಸ್ತಿ ವಸೂಲಾಗದಿರುವುದಕ್ಕೆ ಕಾರಣವೇನು? ಅವರಿಂದ ವಸೂಲು ಮಾಡುವುದಕ್ಕೆ ಹೆದರಿಕೆಯೇನು?

ಶ್ರೀ ಕಡಿದಾಳ್ ಮಂಜಪ್ಪ.—ನರ್ಕಾರ ಯಾರಿಗೂ ಅಂಜುವುದಿಲ್ಲ.

ಶ್ರೀ ಬಿ. ರಾಚಯ್ಯ.—20 ವರ್ಷಗಳಿಂದ ಕಾನೂನು ಪ್ರಕಾರ ಶಿಸ್ತಾಗಿ ಕಾರ್ಯಕ್ರಮ ತೆಗೆದುಕೊಂಡಿದ್ದರೆ ವಸೂಲಾಗುತ್ತಿರಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನು ಪ್ರಕಾರ ಕಾರ್ಯಕ್ರಮ ತೆಗೆದ ಕೊಳ್ಳುತ್ತಿದ್ದಾರೆ. ಆದರೆ ರೈತರು ಹೇಳುವ ಲೆಕ್ಕಕ್ಕೂ ಸರ್ಕಾರದ ಲೆಕ್ಕಕ್ಕೂ ಸರಿಬರದೆ ಈರೀತಿ ಬಾಕಿ ನಿಂತಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸಮಜಾಯಿಷಿ ಪಟ್ಟಿ ಎಂದು ಹೇಳಿದರಲ್ಲಾ, ಅದನ್ನು ಶ್ಯಾನುಭೋಗರು ಪಟೇಲರುತಾನೆ ತಮಗೆ ಕೊಡುವುದು?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಸ್ಪೆಷಲ್ ಆಫೀಸರಿದ್ದಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆ ಸ್ಪೆಷಲ್ ಆಫೀಸರಿಗೆ ಸಮಜಾಯಿಷಿ ಕೊಡುವವರು ಯಾರು?

ಶ್ರೀ ಕಡಿದಾಳ್ ಮಂಜಪ್ಪ.—ಶ್ಯಾನುಭೋಗರು, ಪಟೇಲರು, ಶೇಕದಾರ್ರು, ಅಮಲ್ದಾರರು ಎಲ್ಲರೂ ಇರುತ್ತಾರೆ.

Temple at Neeragunda Village in Hosadurga Taluk.

Q.—324. Sri G. BASAPPA (Hosadurga).—

Will the Government be pleased to state :—

(*a*) whether it has come to their notice that there is an ancient historic and beautiful temple at Neeragunda Village in Hosadurga Taluk ;

(*b*) whether it is in a condition of decay ;

(*c*) whether repeated representations are being made for the protection of this monument ;

(*d*) whether there is any estimate prepared for this work and if so, at what stage it is pending ?

A.—Sri KADIDAL MANJAPPA (Minister for Revenue and Public Works).—

(*a*) It is reported that there is a private Institution Sri Eswaradevaru Temple at Neeragunda.

(*b*) The walls of the temple and the roofing require repairs.

(*c*) No representations either from the villagers or from the public for the protection of this temple have been received so far.

(*d*) No estimate is prepared.

ಶ್ರೀ ಜಿ. ಬಸಪ್ಪ.—ಈ ದೇವಸ್ಥಾನವನ್ನು ಯಾವ ಕಾಲದಲ್ಲಿ ಕಟ್ಟಿಸಿದ್ದು, ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿಲ್ಲ.

ಶ್ರೀ ಜಿ. ಬಸಪ್ಪ.—ಅಲ್ಲಿ ಶಿಲಾ ಶಾಸನಗಳಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಮಗೆ ಬಂದಿರುವ ವರದಿಯ ಪ್ರಕಾರ, ಇದೊಂದು ಖಾಸಗಿ ದೇವಸ್ಥಾನ ಎಂದು ಗೊತ್ತಾಗಿದೆ.

ಶ್ರೀ ಜಿ. ಬಸಪ್ಪ.—ಇದು ನೀಲಾಪುರಿ ಪಟ್ಟಣವೆಂಬ ಪುರಾಣ ಪ್ರಸಿದ್ಧವಾದ ಪಟ್ಟಣವೆಂಬುದು ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿಲ್ಲ.

ಶ್ರೀ ಜಿ. ಬಸಪ್ಪ.—ಅಲ್ಲಿರ ವ ಶಿಲಾ ಶಾಸನಗಳನ್ನು ನಿಮ್ಮ ಆರ್ಕಿಯಾಲಾಜಿಕಲ್ ಇಲಾಖೆಯವರಿಂದ ಪರಿಶೀಲಿಸುವುದಕ್ಕೆ ಪ್ರಯತ್ನ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಜಿ. ಬಸಪ್ಪ.—ಈ ಪುರಾಣ ಪ್ರಸಿದ್ಧವಾದ ಉತ್ತಮವಾದ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಮುಜರಾಯ್ ದೇವಸ್ಥಾನವಲ್ಲ, ಆದ್ದರಿಂದ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಮುಜರಾಯ್ ಕಮಿಷನರು ತಿಳಿಸಿದ್ದಾರೆ.

Date grove reserve lands released for cultivation in Chitaldrug District.

Q.—386. Sri G. DUGGAPPA (Holalkere—Scheduled Castes).—

Will the Government be pleased to state :—

(*a*) the total extent of date grove reserve lands released for cultivation in Chitaldrug District ;

(*b*) the total extent that has been granted hitherto for cultivation ;

(*c*) the total extent of land that has been granted to the depressed class landless people ?

A.—Sri KADIDAL MANJAPPA (Minister for Revenue and Public Works).—

		A.	*G.*
(*a*)	..	22,192	27
(*b*)	..	2,683	14
(*c*)	..	1,099	33

ಶ್ರೀ ಜಿ. ದುಗ್ಗಪ್ಪ.—1099 ಎಕರೆ 33 ಗುಂಟೆಗಳು ನಿಮ್ಮವರ್ಗದವರಲ್ಲಿ ಜಪಾನಿಲ್ಲದವರಿಗೆ ಕೊಡಲ್ಪಟ್ಟಿವೆಯೆಂದು ಹೇಳಿದ್ದೀರಿ. ಇನ್ನೂ ವಿಲೇವಾರಿಯಾಗದಿರ ತಕ್ಕ ದರಖಾನ್ತುಗಳಿಗೆ ಸಂಬಂಧಪಟ್ಟ ಎಷ್ಟು ಕೇಸುಗಳು ನರ್ಕಾರದವರ ಮುಂದೆ pending ಆಗಿವೆ ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಪ್ರಶ್ನೆ ಅರ್ಥವಾಗುವುದಿಲ್ಲ.

Sri A. BHEEMAPPA NAIK.—Has there not been very great demand for excise reserves in Chitaldrug District ?

Sri KADIDAL MANJAPPA.—By whom ?

Sri A. BHEEMAPPA NAIK.—By the poor people who want lands.

Sri KADIDAL MANJAPPA.—Yes.

Sri A. BHEEMAPPA NAIK.—In view of the large extent of land being available, will the Government consider the desirability of disposing of all these lands and getting revenue at least from out of them by granting them to poor people ?

Sri KADIDAL MANJAPPA.—Government have no objection to grant lands which have already been released.

Sri A. BHEEMAPPA NAIK.—Will the Government instruct the Deputy Commissioners to dispose of all these applications and consider them on liberal terms ?

Sri KADIDAL MANJAPPA.—In 1949, a Committee was constituted. That Committee is known as the Date Grove Committee. They have recommended that certain areas should be reserved and certain areas should be released.

Sri A. BHEEMAPPA NAIK.—Will the Government instruct the Deputy Commissioners to dispose them of as early as possible ?

Sri KADIDAL MANJAPPA.—Certainly. We have already issued instructions.

ಶ್ರೀ ಟಿ. ಹನುಮಯ್ಯ.—ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಈಚಲು ವನಗಳು ರಿಲೀಸ್ ಆಗದಿರುವಂಥ ತಾಲ್ಲೂಕು ಯಾವುದಾದರೂ ಇದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇದೆ.

ಶ್ರೀ ಟಿ. ಹನುಮಯ್ಯ.—ಯಾವ ತಾಲ್ಲೂಕಿನಲ್ಲಿ ?

Sri KADIDAL MANJAPPA.—I cannot readily give you the information.

ಶ್ರೀ ಟಿ. ಹನುಮಯ್ಯ.—ಹಿರಿಯೂರು ತಾಲ್ಲೂಕಿನಲ್ಲಿ ಇನ್ನೂ ಈಚಲು ವನಗಳು ರಿಲೀಸ್ ಆಗದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಟಿ. ಹನುಮಯ್ಯ.—ಈ ತಾಲ್ಲೂಕಿನ ಜನಗಳು ಅರ್ಜಿ ಹಾಕಿ ಈ ಈಚಲು ವನಗಳನ್ನು ರಿಲೀಸ್ ಮಾಡಬೇಕೆಂದು ಕೇಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?